ಶ್ರೀ ಬಿ. ಸೋಮಶೇಖರ್ ಉನ್ನತ ಶಿಕ್ಷಣ ಸಚಿವರು.

ಅ) ಶೈಕ್ಷಣಿಕ ಅವಶ್ಯಕತೆಯ ಆಧಾರದ ಮೇಲೆ ಪರಿಶೀಲಿಸಲಾಗುವುದು. ಇದರ ಆಧಾರದ ಮೇಲೆ ನಕ್ಷೆ ತಯಾರಿಸಲು ಕಾಲೇಜು ಶಿಕ್ಷಣ ನಿರ್ದೇಶಕರಿಗೆ ಸೂಚಿಸಲಾಗಿದೆ.

ಆ) 1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ 53ನೇ ಪ್ರಕರಣದಡಿ ಕಾಲೇಜುಗಳನ್ನು ಸ್ಥಾಪಿಸಲು ಬಯಸುವ ಸಂಘ ಸಂಸ್ಥೆಗಳು ಸಂಯೋಜನೆ ಅರ್ಜಿಗಳನ್ನು ನಿಗಧಿತ ಶುಲ್ಕದೊಂದಿಗೆ ಸಂಬಂಧಪಟ್ಟ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ಸಿಂಡಿಕೇಟ್ ಸ್ಥಾಪಿಸುವ ಸ್ಥಳೀಯ ಪರಿಶೀಲನಾ ಸಮಿತಿಯ ಪರಿವೀಕ್ಷಣಾ ವರದಿಯನ್ನು ಶೈಕ್ಷಣಿಕ ಮಂಡಳಿ ಮತ್ತು ಸಿಂಡಿಕೇಟ್ ವಿಶ್ಲೇಷಿಸಿ ಸಂಯೋಜನೆ ನೀಡುವ ಅಥವಾ ತಿರಸ್ಕರಿಸುವ ಅಂತಿಮ ನಿರ್ಧಾರಕ್ಕಾಗಿ ಸರ್ಕಾರಕ್ಕೆ ಕಳುಹಿಸಲಾಗುವುದು. ಸ್ಥಳೀಯ ಪರಿಶೀಲನಾ ಸಮಿತಿಯ ವರದಿಯಲ್ಲಿನ ಅಂಶಗಳ ಆಧಾರದ ಮೇಲೆ ಹಾಗೂ ಶೈಷಣಿಕ ಮಂಡಳಿ ಮತ್ತು ಸಿಂಡಿಕೇಟ್ ನಿರ್ಣಯದ ಬೆಳಕಿನಲ್ಲಿ ಪ್ರತಿಯೊಂದು ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿ ಸಂಯೋಜನೆ ಮಂಜೂರು ಮಾಡಲಾಗುವುದು ಅಥವಾ ತಿರಸ್ಕರಿಸಲಾಗುವುದು

ಸಾರ್ವಜನಿಕ ಆಸ್ಪತ್ರೆ, ಕುಣಿಗಲ್‌ಗೆ ಗಾಯಾಳು ಚಿಕಿತ್ಸಾ ಕೇಂದ್ರ ಸ್ಥಾಪಿಸುವ ಬಗ್ಗೆ.

362(635) ಶ್ರೀ ಎಸ್.ಪಿ.ಮುದ್ದಹನುಮೇಗೌಡ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ಹೆಚ್ಚು ಅಪಘಾತ ಸಂಭವಿಸುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 48ರಲ್ಲಿ ಇರುವ ಸಾರ್ವಜನಿಕ ಆಸ್ಪತ್ರೆ, ಕುಣಿಗಲ್‌ಗೆ ಗಾಯಾಳು ಚಿಕಿತ್ಸಾ ಕೇಂದ್ರವು ಅತ್ಯಾವಶ್ಯಕವಾಗಿರುವುದು ನಿಜವೆ?

2. ಹಾಗಿದ್ದಲ್ಲಿ ಸರ್ಕಾರವು ಸಾರ್ವಜನಿಕ ಆಸ್ಪತ್ರೆ ಕುಣಿಗಲ್‌ಗೆ ಗಾಯಾಳು ಚಿಕಿತ್ಸಾ ಕೇಂದ್ರ ಒದಗಿಸಲು ಕ್ರಮ ತೆಗೆದುಕೊಂಡಿದೆಯೇ?

ಡಾ: ಹೆಚ್.ಸಿ. ಮಹದೇವಪ್ಪ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

1. ಹೌದು.

2. ಪ್ರಸ್ತಾವನೆಯನ್ನು ವಿಶ್ವ ಬ್ಯಾಂಕ್‌ನೆರವಿನ ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲು ಸರ್ಕಾರ ಪರಿಶೀಲಿಸುತ್ತಿದೆ.

ನೀಲಗಿರಿ ತೋಪುಗಳ ಕುರಿತು

363(639) ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್) ಮಾನ್ಯ ಅರಣ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ